# ಸ್ಫೂರ್ತಿಯ ಚಿಲುಮೆ

■ ಪ್ರವೀಣ ಕುಲಕರ್ಣಿ

ಇವರ ಹೆಸರು ಕರಣ್ ಬಜಾಜ್ ಎಂದು. ಈ ಸಾಧಕನನ್ನು ನಿಮಗೆ ಹೇಗೆಂದು ಪರಿಚಯಿಸುವುದು? ಇವರೊಬ್ಬ ಉದ್ಯಮಿ, ಡಿಸ್ಕವರಿಯಂತಹ ಟಿ.ವಿ. ಚಾನೆಲ್ ಮುನ್ನಡೆಸಿದ ಕಾರ್ಯನಿರ್ವಾಹಕ, ಪ್ರಖ್ಯಾತ ಕಾದಂಬರಿಕಾರ, ಅಷ್ಟೇ ಅಲ್ಲ, ಹಲವು ಸ್ಟಾರ್ಟ್ ಅಪ್‌ಗಳ ಜನಕನೂ ಹೌದು!

ಶಿಕ್ಷಣರಂಗದ ಆಗು–ಹೋಗುಗಳ ಪರಿಚಯ ಇದ್ದವರಿಗೆ ‘ವೈಟ್ ಹ್ಯಾಟ್ ಜೂನಿಯರ್’ ಕಂಪನಿಯ ಪರಿಚಯ ಇದ್ದೇ ಇರುತ್ತದೆ. ಆನ್‌ಲೈನ್ ಮೂಲಕ ದೂರ ಶಿಕ್ಷಣ ನೀಡುತ್ತಿದ್ದ ಈ ಸಂಸ್ಥೆಯನ್ನು ಹುಟ್ಟುಹಾಕಿದವರು ಇದೇ ಕರಣ್. ವಿದ್ಯಾರ್ಥಿಗಳಿಗೆ ಗಣಿತ ಕೌಶಲವನ್ನು ಹೇಳಿಕೊಡುವ ಆನ್‌ಲೈನ್ ವೇದಿಕೆ ಇದಾಗಿತ್ತು. 2018ರಲ್ಲಿ ಶುರುವಾಗಿದ್ದ ‘ವೈಟ್ ಹ್ಯಾಟ್ ಜೂನಿಯರ್’ ಅನ್ನು ಬೈಜುಸ್ ಕಂಪನಿಯು 2020ರಲ್ಲಿ 30 ಕೋಟಿ ಡಾಲರ್ (₹ 250 ಕೋಟಿ) ಕೊಟ್ಟು ಖರೀದಿಸಿತು. ಬೈಜುಸ್ ಫ್ಯೂಚರ್ ಸ್ಕೂಲ್‌ನ ಸಿಇಒ ಆಗಿಯೂ ಕರಣ್ ನೇಮಕಗೊಂಡರು.

ವೈಟ್ ಹ್ಯಾಟ್ ಜೂನಿಯರ್ ಕಂಪನಿಯನ್ನು ಶುರುಮಾಡುವ ಮುನ್ನ ಡಿಸ್ಕವರಿ ಚಾನೆಲ್‌ನಲ್ಲಿ ಕರಣ್ ಸಿಇಒ ಆಗಿದ್ದರು. ಸ್ವಂತ ಉದ್ದಿಮೆಯನ್ನು ಸ್ಥಾಪಿಸುವ ಉದ್ದೇಶದಿಂದ ಸಿಇಒ ಹುದ್ದೆಯನ್ನೇ ತ್ಯಜಿಸಿ ಅವರು ಹೊರಬಂದರು. ಇತ್ತೀಚೆಗೆಷ್ಟೇ ಅವರ ಕೃತಿ, **‘The Freedom Manifesto: 7 Rules to Live the Life of Your Calling’** ಪ್ರಕಟವಾಗಿದೆ. ನೆಚ್ಚಿನ ಕೆಲಸವನ್ನು ಬಿಟ್ಟು ಉದ್ದಿಮೆ ಸ್ಥಾಪಿಸಿದ ತಮ್ಮ ಸಾಹಸದ ಕುರಿತ ಕಥೆಯನ್ನು ಅದರಲ್ಲಿ ಅವರು ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾರೆ.

ಡಿಸ್ಕವರಿ ಚಾನೆಲ್‌ನಲ್ಲಿ ಸಿಇಒ ಆಗುವ ಮೊದಲು ಕರಣ್ ಅಮೆರಿಕದಲ್ಲಿ ಕೆಲಸದಲ್ಲಿದ್ದರು. 2008ರ ಆರ್ಥಿಕ ಹಿಂಜರಿತ ಅವರ ಉಳಿತಾಯವನ್ನೆಲ್ಲ ನುಂಗಿ ನೀರು ಕುಡಿಯಿತು. ಕೆಲಸ ನೀಡಿದ ಕಂಪನಿ ದಿವಾಳಿ ಎದ್ದು, ಅವರು ನಿರುದ್ಯೋಗಿಯಾದರು. ಹೀಗಾಗಿ ಬೇರೆ ದಾರಿ ಕಾಣದೆ ಭಾರತಕ್ಕೆ ವಾಪಸ್ ಬಂದರು. ಆ ವೇಳೆಗೆ ಅವರ ಅಮ್ಮ ಕ್ಯಾನ್ಸರ್ ಗೆ ತುತ್ತಾದರು. ನೋವು, ಒತ್ತಡ ಮರೆಯಲು ಧ್ಯಾನದ ದಾರಿಯನ್ನೂ ಹಿಡಿದರು. ನಿಧಾನವಾಗಿ ಬದುಕಿನಲ್ಲಿ ಮತ್ತೆ ಚೇತರಿಸಿಕೊಂಡ ಕರಣ್, ಡಿಸ್ಕವರಿ ಚಾನೆಲ್ ಸೇರಿದರು.



ಸ್ವಂತ ಉದ್ಯಮದ ಆಸೆಯಿಂದ ಸಿಇಒ ಸ್ಥಾನವನ್ನು ಬಿಟ್ಟುಬಂದರು. ತಮ್ಮ ಮನೆಯನ್ನೇ ಹೊಸ ಕಂಪನಿಯ ಕಚೇರಿಯನ್ನಾಗಿ ಮಾಡಿದರು. ಕಷ್ಟಪಟ್ಟು ಸಂಸ್ಥೆಯನ್ನು ಬೆಳೆಸಿದರು. ಕೈತುಂಬ ಸಂಬಳ ಕೊಡುವ ಕೆಲಸವನ್ನು ಬಿಟ್ಟು ಹೊಸ ಸಂಸ್ಥೆಯನ್ನು ಕಟ್ಟಲು ಎದೆಗಾರಿಕೆ ಬೇಕು. ಆದರೆ, ಅಂತಹ ಸಾಹಸಕ್ಕೆ ಮುಂದಾದರೆ ದೊಡ್ಡ ಯಶಸ್ಸು ಕಟ್ಟಿಟ್ಟ ಬುತ್ತಿ ಎನ್ನುತ್ತಾರೆ ಕರಣ್. ಉದ್ದಿಮೆ ಕಟ್ಟುವ ಹಾದಿಯಲ್ಲಿ ಎಂತಹ ಏಳು–ಬೀಳುಗಳಿಗೆ ನಾವು ಸನ್ನದ್ಧವಾಗಿರಬೇಕಾದುದು ಅಷ್ಟೇ ಅಗತ್ಯ ಎಂದು ಎಚ್ಚರಿಕೆಯ ಮಾತುಗಳನ್ನೂ ಆಡುತ್ತಾರೆ. ವೈಟ್ ಹ್ಯಾಟ್ ಜೂನಿಯರ್ ಕಂಪನಿ ಶುರು ಮಾಡಲು ತಮ್ಮ ಅದುವರೆಗಿನ ಎಲ್ಲ ಉಳಿತಾಯದ ಹಣವನ್ನೂ ಕರಣ್ ಸುರಿದಿದ್ದರು. ಆದರೆ, ಎರಡೇ ವರ್ಷಗಳಲ್ಲಿ ಅವರ ಊಹೆಗೂ ನಿಲುಕದಷ್ಟು ಲಾಭವನ್ನು ಆ ಕಂಪನಿ ತಂದುಕೊಟ್ಟಿತು.

‘ನನ್ನ ಇಬ್ಬರೂ ಪುತ್ರಿಯರು ಕ್ರೀಡೆಯಲ್ಲಿ ಉತ್ತುಂಗಕ್ಕೆ ಏರಿ, ಒಲಿಂಪಿಯನ್‌ಗಳಾಗಿ ಹೊರಹೊಮ್ಮಬೇಕು’ ಎಂಬ ಕನಸನ್ನೂ ಅವರು ಹೊಂದಿದ್ದಾರೆ. ‘ಕನಸು ಕಾಣುವುದನ್ನು ಬಿಡಬೇಡಿ. ನಮ್ಮ ಯಶಸ್ಸಿನ ದಾರಿಗೆ ಬಲ ತಂದುಕೊಡುವ ಶಕ್ತಿ ಅದಕ್ಕಿದೆ’ ಎನ್ನುವ ಕರಣ್, ‘ಸೋಲು–ಗೆಲುವನ್ನು ಸಮಾನವಾಗಿ ಸ್ವೀಕರಿಸಿ, ಸೋಲಿನಿಂದ ಪುಟಿದೆದ್ದು ನಿಲ್ಲುವ ಶಕ್ತಿಯನ್ನು ಕ್ರೀಡಾ ಮನೋಭಾವ ತಂದುಕೊಡುತ್ತದೆ ಎಂಬ ಶಾಲೆಯ ಪಾಠವೇ ನನ್ನ ಕೈಹಿಡಿದಿದೆ’ ಎನ್ನುತ್ತಾರೆ.

ಬೆಂಗಳೂರಿನ ಐಐಎಂಬಿಯಿಂದ ಎಂಬಿಎ ಪದವೀಧರರಾಗಿರುವ ಕರಣ್, ಉದ್ದಿಮೆ ವಲಯದಲ್ಲಿ ಹೇಗೆ ಯಶಸ್ಸು ಕಂಡರೋ ಹಾಗೆಯೇ ಸಾಹಿತ್ಯ ವಲಯದಲ್ಲೂ ಗೆಲುವಿನ ನಗೆ ಬೀರಿದವರು. ‘ಕೀಪ್ ಆಫ್ ದಿ ಗ್ರಾಸ್’, ‘ಜಾನಿ ಗಾನ್ ಡೌನ್’, ‘ದಿ ಸೀಕರ್’, ‘ದಿ ಯೋಗ ಆಫ್ ಮ್ಯಾಕ್ಸ್ ಡಿಸ್‌ಕಂಟೆಂಟ್’ ಮೊದಲಾದ ಕೃತಿಗಳ ಮೂಲಕ ಸಾಹಿತ್ಯದಲ್ಲೂ ದೊಡ್ಡ ಹೆಸರು ಮಾಡಿದವರು ಅವರು. ಉಳಿದವರೂ ‘ಬೆಸ್ಟ್ ಸೆಲ್ಲರ್’ಗಳನ್ನು ಹೇಗೆ ಬರೆಯಬೇಕು ಎಂಬ ವಿಷಯವಾಗಿ ಉಚಿತವಾಗಿ ತರಬೇತಿಯನ್ನೂ ನೀಡಿದವರು.

‘ನನ್ನ ಎಲ್ಲ ಬರವಣಿಗೆ ಥಟ್ಟಂತ ಪ್ರಕಟಣೆಗೆ ಸ್ವೀಕಾರ ಆಗಿಬಿಡುತ್ತದೆ ಎಂದುಕೊಳ್ಳಬೇಡಿ. ನನ್ನ ಸುಮಾರು 60 ಬರವಣಿಗೆಗಳು ತಿರಸ್ಕೃತ ಆಗಿವೆ. ಆದರೆ, ಎಂದಿಗೂ ನಾನು ಪ್ರಯತ್ನವನ್ನು ಬಿಟ್ಟಿಲ್ಲ’ ಎಂದು ಕಣ್ಣು ಮಿಟುಕಿಸುತ್ತಾರೆ ಕರಣ್. ಕಷ್ಟಗಳಿಗೆ ಅಂಜಬಾರದು, ಅವುಗಳನ್ನೇ ಮೆಟ್ಟಿಲು ಮಾಡಿಕೊಂಡು ಗೆಲುವಿನ ಗುರಿ ತಲುಪಬೇಕು ಎನ್ನುವುದು ಅವರ ಫಿಲಾಸಫಿ. ಹಾಗಾಗಿಯೇ ಕರಣ್ ಅವರ ಬದುಕು, ಅವರಂತೆ ಕನಸು ಕಾಣುವ ಉಳಿದವರಿಗೂ ಸ್ಫೂರ್ತಿಯ ಸೆಲೆಯಾಗಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65